ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಲ್ಪಟ್ಟ ನಿರುದ್ಯೋಗಿಗಳು

3015 (344) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು;

ಆ) ಇವರಲ್ಲಿ ಎಷ್ಟು ಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಣಿ ಮಾಡಿಸಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)

ಇ) ಕಳೆದ ಮೂರು ವರ್ಷಗಳಿಂದ ಉದ್ಯೋಗ ವಿನಿಮಯ ಕೇಂದ್ರದ ಮತಿಯಿಂದ ಎಷ್ಟು ಜನರಿಗೆ ನೌಕರಿ ದೊರೆತಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಉದ್ಯೋಗ ವಿನಿಮಯ ಕೇಂದ್ರವನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ; ಇದ್ದಲ್ಲಿ ಕಾರಣಗಳೇನು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಕಾರ್ಮಿಕ ಸಚಿವರು):

ಅ) ರಾಜ್ಯದಲ್ಲಿರುವ ನಿರುದ್ಯೋಗಿಗಳ ಖಚಿತ ಸಂಖ್ಯೆ ಲಭ್ಯವಿರುವುದಿಲ್ಲ.

ಆ) ಮೇ–2003ರ ಅಂತ್ಯಕ್ಕೆ 18,65,943 ಅಭ್ಯರ್ಥಿಗಳು. (ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ)

ಇ) 15,977 ಅಭ್ಯರ್ಥಿಗಳು ಉದ್ಯೋಗ ಪಡೆದಿರುತ್ತಾರೆ. ವರ್ಷವಾರು ವಿವರ ಈ ಕೆಳಗಿನಂತಿದೆ:–

ವರ್ಷ	ಉದ್ಯೋಗ ಪಡೆದವರ ಸಂಖ್ಯೆ
2000	8,693
2001	4,172
2002	3,112
ಒಟ್ಟು	**15,977**

(ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ).

ಈ) ಇಲ್ಲ

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ ಆಧುನಿಕ ತಾಂತ್ರಿಕತೆ ಅಳವಡಿಸಿ ವೆಬ್‌ಸೈಟ್ ಮುಖಾಂತರ ಉದ್ಯೋಗ ಸೇವೆಯನ್ನು ಪುನಶ್ಚೇತನಗೊಳಿಸಿ ಉದ್ಯೋಗ ಮತ್ತು ತರಬೇತಿ ಕೇಂದ್ರಗಳ ಸಿಬ್ಬಂದಿಗಳ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

Annexure 1 to the starred L.A. Qn. No. 3015

District-wise details of applicants registered for employment assistance

Sl. No.	District	Live Register Information as at the end of May 2003
1	2	3
1	Bangalore (Urban & Rural)	4,64,031
2	Bagalkote	40,533

1	2	3
3	Belgaum	94,169
4	Bellary	75,597
5	Bidar	63,498
6	Bijapur	35,325
7	Chamarajanagar	29,471
8	Chickmagalur	36,618
9	Chitradurga	52,718
10	Davangere	66,105
11	Dakshina Kannada	45,225
12	Dharwad	49,586
13	Gadag	28,665
14	Gulbarga	1,05,178
15	Hassan	78,198
16	Haveri	29,152
17	Kodagu	17,024
18	Kolar	93,786
19	Koppal	25,349
20	Mandya	62,803
21	Mysore	99,600
22	Raichur	44,766
23	Shimoga	55,747
24	Tumkur	89,446
25	Udupi	21,329
26	Uttara Kannada	63,024
	Total	**18,65,943**

Annexure 2 to the starred L.A. Qn. No. 3015

District-wise details of applicants placed through Employment Exchange's during the last 3 years

Sl. No.	District	No. of Applicants placed		
		2000	2001	2002
1	2	3	4	5
1	Bangalore (Urban & Rural)	1172	1143	951

1	2	3	4	5
2	Bagalkote	358	51	67
3	Belgaum	1226	90	133
4	Bellary	409	50	85
5	Bidar	71	506	55
6	Bijapur	295	31	82
7	Chamarajanagar	571	42	83
8	Chickmagalur	95	88	26
9	Chitradurga	352	79	42
10	Davangere	495	35	29
11	Dakshina Kannada	244	98	138
12	Dharwad	139	184	209
13	Gadag	303	31	81
14	Gulbarga	113	188	107
15	Hassan	112	127	73
16	Haveri	126	526	60
17	Kodagu	228	35	11
18	Kolar	79	134	54
19	Koppal	36	36	85
20	Mandya	406	139	95
21	Mysore	602	142	294
22	Raichur	366	58	107
23	Shimoga	405	91	96
24	Tumkur	99	75	59
25	Udupi	288	34	32
26	Uttara Kannada	103	159	58
	Total	**8693**	**4172**	**3112**

ಶ್ರೀ ಪಿ.ಹೆಚ್. ಪೂಜಾರ್ : ನಾನು ಕೇಳಿರುವ (ಅ) ಪ್ರಶ್ನೆಗೆ 2003ರ ಅಂತ್ಯದವರೆಗೆ 18,65,947 ಅಭ್ಯರ್ಥಿಗಳು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ ಕಳೆದ 3 ವರ್ಷಗಳಿಂದ ಉದ್ಯೋಗ ವಿನಿಮಯ ಕೇಂದ್ರದ ಮತಿಯಿಂದ ಎಷ್ಟು ಜನರಿಗೆ ಉದ್ಯೋಗವನ್ನು ನೀಡಲಾಗಿದೆ ಎಂದು ಎರಡನೆಯ ಪ್ರಶ್ನೆಯನ್ನು ಕೇಳಿದಾಗ ಅವರು 15977 ಜನರಿಗೆ ಉದ್ಯೋಗ ಕೊಟ್ಟಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದವರ ಪ್ರಣಾಳಿಕೆಯ ಮುಖಾಂತರ ಈ ರಾಜ್ಯದ ನಿರುದ್ಯೋಗಿಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತೇವೆ ಉದ್ಯೋಗವಕಾಶಗಳನ್ನು ಹೆಚ್ಚಿಸುತ್ತೇವೆ

ಎನ್ನುವಂತಹ ಭರವಸೆಯನ್ನು ಕೊಟ್ಟಂತಹ ಸಂದರ್ಭದಲ್ಲಿ ಈ 3 ವರ್ಷಗಳ ಒಂದು ಸುದೀರ್ಘ ಅವಧಿಯಲ್ಲಿ ಸರ್ಕಾರದ ಸಾಧನೆ 80 ಪರ್ಸೆಂಟ್ ಮಾತ್ರ. ನಿರುದ್ಯೋಗಿಗಳ ಸಂಖ್ಯೆಯನ್ನು ಮಾತ್ರ ಒಂದಕ್ಕಿಂತ ಕಡಿಮೆ ಮಾಡಿದ್ದಾರೆ. ಈ ದಿಸೆಯಲ್ಲಿ ಸರ್ಕಾರದ ಈ ಒಂದು ಕಾರ್ಯಕ್ರಮವೇನಿದೆ. ಇದು ಅತ್ಯಂತ ಕೆಳಮಟ್ಟದ್ದಾಗಿದೆ ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ಉದ್ಯೋಗ ವಿನಿಮಯ ಕೇಂದ್ರವನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ ಎನ್ನುವಂತಹದ್ದನ್ನು ನಾನು ಕೇಳಿದಾಗ ಇಲ್ಲವೆಂದು ಉತ್ತರವನ್ನು ಕೊಡುತ್ತಾ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ ಅಧುನಿಕ ತಾಂತ್ರಿಕತೆ ಅಳವಡಿಸಿ ವೆಬ್‌ಸೈಟ್ ಮುಖಾಂತರ ಉದ್ಯೋಗ ಸೇವೆಯನ್ನು ಪುನಶ್ಚೇತನಗೊಳಿಸಿ ಉದ್ಯೋಗ ಮತ್ತು ತರಬೇತಿ ಕೇಂದ್ರಗಳ ಸಿಬ್ಬಂದಿಗಳ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಆಯಿತು ಬಿಡಿ, ಎರಡು ಪ್ರಶ್ನೆಗಳನ್ನು ಕೇಳಿದ್ದೀರಿ ಅದಕ್ಕೆ ಮಾನ್ಯ ಸಚಿವರು ಮೊದಲು ಉತ್ತರವನ್ನು ಹೇಳಲಿ. ಎರಡು-ಮೂರು ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರೆ ಹೇಗೆ?

ಶ್ರೀ ಖಮರಲ್ ಇಸ್ಲಾಂ : ಸನ್ಮಾನ್ಯ ಅಧ್ಯಕ್ಷರೆ, Up to 1996 Act all the departments which wanted to recruit, had to recruit through the Employment Exchange according to 1959 Act. 1996ನಲ್ಲಿ ಇದರ ಬಗ್ಗೆ ಒಂದು ಸುಪ್ರೀಂಕೋರ್ಟ್ ಡಿಸಿಷನ್ ಆಗಿದೆ. ಆ ಡಿಸಿಷನ್ ಪ್ರಕಾರ intending department can go to the open market through advertisement. ಈ ತರಹ ನಿರ್ಣಯ ಬಂತು. ಈ ನಿರ್ಣಯ ಬಂದಮೇಲೆ ತಮಗೆ ನಾವು ಪಟ್ಟಿಯನ್ನು ಕೊಟ್ಟಿದ್ದೇವೆ. ಒಟ್ಟು ಎಷ್ಟು ಜನ ನಿರುದ್ಯೋಗಿಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆಂದರೆ, ಅದು 18,65,943. ಮೂರು ವರ್ಷಗಳಲ್ಲಿ ಅಂದರೆ 2000ದಲ್ಲಿ 8,693, 2001 ರಲ್ಲಿ 4,172 2002ರಲ್ಲಿ 3,112 ಒಟ್ಟು 15,977 ಮಂದಿ ನಿರುದ್ಯೋಗಿಗಳು ನೋಂದಣಿ ಮಾಡಿಸಿದ್ದಾರೆ. ಅಂದರೆ ಪಾಯಿಂಟ್ 8% ಆಯಿತು. Below 1%, it is because of the Supreme Court order. How to overcome this? ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಶೆಟ್ಟರ್ ಅವರು he has written me a letter. "Why not you bring a Bill in this House, which has already been passed in the West Bengal Assembly?" ಎಂದು. ಎರಡೂವರೆ ವರ್ಷಗಳಿಗೆ ಮುಂಚೆ ಆ ಬಿಲ್ ಅಲ್ಲಿ ಪಾಸ್ ಆಗಿದೆ. ಅದೇ ತರಹದ ಬಿಲ್ ನನ್ನ ಕಡೆ ರೆಡಿ ಇದೆ. ಆದರೆ ಸದನದಲ್ಲಿ ಏಕೆ ತರಲಿಲ್ಲ ಅಂದರೆ ಆ ಬಿಲ್‌ಗೆ ಪ್ರೆಸಿಡೆಂಟ್ ಆಫ್ ಇಂಡಿಯಾ ಅವರು ಆಸೆಂಟ್ ಕೊಟ್ಟಿಲ್ಲ. ಈಗ ಮತ್ತೆ ಯಾವ ತರಹ ಇದು ಆಗಬೇಕು? Even in the Government of India level, only 1% ರೆಕ್ರೂಟ್‌ಮೆಂಟ್ ಆಗಿದೆ. 1996ರ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಯಾವ ತರಹ ಎಫೆಕ್ಟ್ ಆಗಿದೆ ಎಂದರೆ even in the Government of India level, 1% recruitment has taken place, including all other States. Karnataka Administrative Reforms Commission, ನವರು ಒಂದು ಸಲಹೆ ಕೊಟ್ಟಿದ್ದಾರೆ; ಆ ಸಲಹೆ ಏನೆಂದರೆ ಮಾಡರ್ನ್ ಟೆಕ್ನಿಕ್ಸ್ ಯೂಸೇಜ್ ಮಾಡಿ ಕಂಪ್ಯೂಟಿಂಗ್ ಸ್ಕೀಮ್ ಉಪಯೋಗಿಸಿ ನೀವು ರೀಜೆನ್ಯುಯೇಟ್ ಮಾಡಬೇಕು, ಆ ಸಲಹೆ ಪ್ರಕಾರ ನಾನು ಒಂದು Computer Aided Manpower

Placement Unit ಎಂದು, ಆ ಸ್ಕೀಮನ್ನು ಪೈಲೆಟ್ ಸ್ಟೇಜ್‌ನಲ್ಲಿ ಮಾಡಿದ್ದೇನೆ. ಅದರ ಪ್ರಕಾರ 6 ಜಿಲ್ಲೆಗಳಲ್ಲಿ ಆ ಸ್ಕೀಮ್ ಜಾರಿ ಮಾಡಿದ್ದೇನೆ. ಆ ಸ್ಕೀಮ್ ಪ್ರಕಾರ ಸ್ಮಾರ್ಟ್ ಕಾರ್ಡ್ ಕೊಡುತ್ತೇವೆ. They can register with all the testimonials in that card. ಕರ್ನಾಟಕ ರಾಜ್ಯದಲ್ಲಿ ಕನ್ನಡಿಗರಿಗೆ ಎಕ್ಸಲೆನ್ಸ್ ಇದೆ ಮತ್ತು ಕನ್ನಡಿಗರಿಗೆ ಆ ಡೇಟಾವನ್ನು ನಾನು ಕಂಪ್ಯೂಟರ್ ಸ್ಕೀಮ್‌ನಲ್ಲಿ ಇಟ್ಟಿದ್ದೇನೆ. ಅದು ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಕ್ಯಾಮ್‌ಕೋ ಡಾಟಕಾಮ್ This data will be available to all the employers. So, the Kannadigas can get employment not only at the national level, but also at the international level. ಈ ಮಾಡರ್ನ್ ಟೆಕ್ನಿಕ್ಸ್ ಬಗ್ಗೆ ನಮ್ಮ ಕರ್ನಾಟಕ ಅಡ್‌ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್ ಏನು ಸಲಹೆ ಕೊಟ್ಟಿದೆ ಆ ಸಲಹೆ ಪ್ರಕಾರ ನಾನು ಇಂಟ್ರಡ್ಯೂಸ್ ಮಾಡಿದ್ದೇವೆ. ಈಗ ಇದು ಪೈಲೆಟ್ ಸ್ಟೇಜ್‌ನಲ್ಲಿದೆ. ಈಗಾಗಲೇ 50 ದಿನಗಳಲ್ಲಿ 5000 ಜನ ಈ ಆರು ಸೆಂಟರ್ಸ್‌ನಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ ಮತ್ತು ಈ ಫಸ್ಟ್ ಪಾರ್ಟ್‌ನಲ್ಲಿ ಮ್ಯಾಕ್ಸಿಮಮ್ ನಮ್ಮ ಪ್ರಕಾರ ಹದಿನೈದರಿಂದ ಇಪ್ಪತ್ತು ಸಾವಿರ people will get registered. I am confident that all the employers can get this data which is available. Download in their computer and need not depend on the private agencies so that our Kannadigas should not be harassed. Their excellence should be used not only in this State, not only in this country, but throughout the world. ಇದು ನಮ್ಮ ಸರ್ಕಾರದ ನೀತಿ, ಈ ನೀತಿ ಪ್ರಕಾರ ಈ ಸ್ಕೀಮ್ ಪೈಲೆಟ್ ಸ್ಟೇಜ್‌ನಲ್ಲಿದೆ.

ಶ್ರೀ ಪಿ.ಹೆಚ್. ಪೂಜಾರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ಹೇಳಿದರು ಕಂಪ್ಯೂಟರ್ ಮುಖಾಂತರ ಇದನ್ನು ಜೋಡಿಸಬೇಕು, ಅನುಕೂಲ ಕಲ್ಪಿಸಬೇಕು ಎಂದು, ನನ್ನ ಮೂಲ ಪ್ರಶ್ನೆ ಇದ್ದುದ್ದು ಅದೇ. ಸರ್ಕಾರ ಈ ಕಂಪು ಯೋಜನೆಯನ್ನು ಸನ್ಮಾನ್ಯ ಸಚಿವರ ಮುಖಾಂತರ 17ನೇ ತಾರೀಖು ಉದ್ಘಾಟನೆ ಮಾಡಿಸಿದ್ದಾರೆ, ಮುಂದೆ 27ನೇ ತಾರೀಖು ನಿರ್ದೇಶಕರು ಎಲ್ಲಾ ಅಧೀನ ಅಧಿಕಾರಿಗಳಿಗೆ ಮತ್ತು ಜಿಲ್ಲಾ ಅಧಿಕಾರಿಗಳಿಗೆ ಕಡ್ಡಾಯವಾಗಿ 100–00 ರೂಪಾಯಿಗಳ ಶುಲ್ಕ ಪಾವತಿಸಿ ಕಂಪ್ಯೂಟರ್ ಮೂಲಕವೇ ತಮ್ಮ ಹೆಸರುಗಳನ್ನು ನಿರುದ್ಯೋಗಿಗಳು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಆಡಳಿತ ಸುಧಾರಣೆ ಸಮಿತಿಯ ನೇತೃತ್ವ ವಹಿಸಿ ಒಂದು ಸಲಹೆಯನ್ನು ಕೊಟ್ಟಿದ್ದರು, ಉದ್ಯೋಗ ವಿನಿಮಯ ಇಲಾಖೆಯನ್ನು ಮುಚ್ಚಿ ಎಲ್ಲವನ್ನೂ ಕಂಪ್ಯೂಟರೀಕರಣಗೊಳಿಸಬೇಕು ಎನ್ನುವ ಒಂದು ಶಿಫಾರಸ್ಸು ಮಾಡಿದ್ದರು, ಅದರ ಬಗ್ಗೆ ನಮಗೆ ಸ್ವಾಗತ ಇದೆ, ಆದರೆ ಅವರು ಖಾಸಗೀಕರಣ ಮಾಡಲು ಹೇಳಿದ್ದಿಲ್ಲ. ಸರ್ಕಾರ ಈ ಹಿನ್ನೆಲೆಯಲ್ಲಿ ಅಧಿಕಾರಿಗಳು, ರಾಜಕಾರಣಿಗಳ ವ್ಯವಸ್ಥೆ ಎಲ್ಲಾ ಸೇರಿಸಿಕೊಂಡು ಈ ಕಂಪ್ಯೂಟರೀಕರಣಗೊಳಿಸುವ ನೆಪದಲ್ಲಿ ಖಾಸಗೀಕರಣ ಮಾಡಲಿಕ್ಕೆ ಹೊರಟಿದ್ದಾರೆ. ಖಾಸಗಿ ಕಂಪನಿಯವರಿಗೆ ಈ ಕಾಂಟ್ರಾಕ್ಟ್ ಕೊಟ್ಟಿರುವುದು ಗೊತ್ತಾಗಿದೆ.

ಅಧ್ಯಕ್ಷರು : ಸಂಕ್ಷಿಪ್ತವಾಗಿ ಸಪ್ಲಿಮೆಂಟರಿ ಪ್ರಶ್ನೆ ಕೇಳಿ, ಭಾಷಣ ಮಾಡಿದರೆ ಹೇಗೆ? ನಮ್ಮ ಮುಂದೆ ಇನ್ನೂ 8 ಪ್ರಶ್ನೆಗಳಿವೆ.

ಶ್ರೀ ಪಿ.ಹೆಚ್. ಪೂಜಾರ್ : ಒಟ್ಟಾರೆ ಇದರಲ್ಲಿ ಮೂಲ ತತ್ವ ಅಡಗಿರುವುದೇನೆಂದರೆ ರೂ. 100–00 ಶುಲ್ಕ ವಸೂಲಿ ಮಾಡುವಂತಹದ್ದು ಏನಿದೆ ಇದು ಸರ್ಕಾರ ಮಾಡುತ್ತಿರುವ ಅಕ್ಷಮ್ಯ

ಅಪರಾಧ, ಮೊದಲೇ ನಿರುದ್ಯೋಗಿಗಳು, ಇಂಥದ್ದರಲ್ಲಿ 100 ರೂ.ಗಳ ಶುಲ್ಕ ಪಾವತಿ ಮಾಡಿ ಎನ್ನುವಂತಹ ಅವಶ್ಯಕತೆ ಏನಿತ್ತು? ಸರ್ಕಾರ ಈ ಉದ್ಯೋಗ ವಿನಿಮಯ ತರಬೇತಿ ಕೇಂದ್ರದ ವ್ಯವಸ್ಥೆ ಮುಖಾಂತರ 10–20 ರೂ.ಗಳಲ್ಲಿ ಅಲ್ಲೇ ಕಂಪ್ಯೂಟರ್ ತರಬೇತಿ ಕೊಟ್ಟು ಅದನ್ನು ಅವರ ಮುಖಾಂತರ ವಸೂಲು ಮಾಡುವಂತಹ ಕೆಲಸ ಮಾಡಿದ್ದರೆ ನಾವು ಸ್ವಾಗತ ಮಾಡುತ್ತಿದ್ದೆವು.

ಅಧ್ಯಕ್ಷರು : ದಯವಿಟ್ಟು ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ. ಪ್ರಶ್ನೆ ಕೇಳುವುದನ್ನು ಬಿಟ್ಟು ಭಾಷಣ ಮಾಡುತ್ತಿದ್ದೀರಿ.

ಶ್ರೀ ಪಿ.ಹೆಚ್. ಪೂಜಾರ್ : ಒಟ್ಟಾರೆ ರಾಜ್ಯದಲ್ಲಿ 400–500 ಜನ ಉದ್ಯೋಗ ವಿನಿಮಯ ಕಚೇರಿಯಲ್ಲಿದ್ದಾರೆ, ಅವರನ್ನೂ ಕೂಡ ನಿರುದ್ಯೋಗಿಗಳನ್ನಾಗಿ ಮಾಡುವಂತಹ ಹುನ್ನಾರ ಸರ್ಕಾರ ಮಾಡುತ್ತಿದೆಯೆನ್ನುವಂತಹ ಭಾವನೆ ಬರುತ್ತಿದೆ. ದಯವಿಟ್ಟು 100–00 ರೂ.ಗಳ ಶುಲ್ಕ ವಸೂಲು ಮಾಡುವಂತಹ ಏನು ಕಾರ್ಯಕ್ರಮವನ್ನು ತಾವು ಹಾಕಿಕೊಂಡಿದ್ದೀರಿ ಅದನ್ನು ತಕ್ಷಣ ನಿಲ್ಲಿಸಬೇಕು. ನಿರುದ್ಯೋಗ ಸಮಸ್ಯೆ ಎನ್ನುವಂಥ ಬೆಂಕಿಗೆ ತುಪ್ಪ ಹಾಕುವಂತಹ ಕೆಲಸ ಮಾಡುತ್ತಿದ್ದೀರಿ. ಇದನ್ನು ಬಂದ್ ಮಾಡಬೇಕು. ಈಗಾಗಲೇ ಏನು ನೂರು ರೂಪಾಯಿಗಳನ್ನು ವಸೂಲಾಡುವಂಥ ಯೋಜನೆಯನ್ನು ಹಾಕಿಕೊಂಡಿದ್ದೀರಿ.....

ಅಧ್ಯಕ್ಷರು : ಉತ್ತರ ಹೇಳಿ, 100–00 ರೂ. ಶುಲ್ಕ ವಸೂಲಿ ಯೋಜನೆ ಬಗ್ಗೆ ಉತ್ತರ ಹೇಳಿ, ಅವರು ಭಾಷಣ ನಿಲ್ಲಿಸುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಆ ಕಂಪ್ಯೂಟರ್ ಸಂಸ್ಥೆ ಕೂಡ ಜವಾಬ್ದಾರಿಯುತವಾದ ಸಂಸ್ಥೆ ಅಲ್ಲ, ಆ ಸಂಸ್ಥೆ ಮೇಲೆ ಸರ್ಕಾರಕ್ಕೆ ಯಾವುದೇ ಹಿಡಿತ ಕೂಡ ಇಲ್ಲ. ಒಂದಾನೊಂದು ಸಂದರ್ಭದಲ್ಲಿ ಆ ಸಂಸ್ಥೆ ಮುಚ್ಚುವ ಸ್ಥಿತಿಯಲ್ಲಿದ್ದಾಗ ಕೇಳುವವರಿಲ್ಲ. ರಾಜ್ಯದ ವ್ಯವಸ್ಥೆಗೆ ತೊಂದರೆ ಬರುವಂತಹದ್ದು ಇದೆ. ದಯವಿಟ್ಟು ಆ ಕಂಪೆನಿಗೆ ಕೊಡಬೇಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಖಮರುಲ್ ಇಸ್ಲಾಂ : ಸನ್ಮಾನ್ಯ ಅಧ್ಯಕ್ಷರೇ, MOU is signed between the Directorate of Employment Exchange and one agency. According to the MOU, Government need not pay a single pie. There is no burden on the Government. According to the old system, a candidate has to spend at least Rs. 55 to Rs. 60 for giving all his originals and other things and also the photographs. ಇಲ್ಲಿ ಸ್ಮಾರ್ಟ್ ಕಾರ್ಡ್‌ಗೆ ಕ್ಯಾಲ್ಕುಕ್ಯುಲೇಷನ್ ಮಾಡಿ ಆ 100.00 ರೂ.ಗಳನ್ನು they are collecting, not directly. The agency has to put its hardware, its man and it should give training to our own employees through our Employment Exchange only. ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಏನೂ ಕೆಲಸ ಇಲ್ಲ 6 ತಿಂಗಳುಗಳಲ್ಲಿ ಈ ಪೈಲೆಟ್ ಸ್ಕೀಮನ್ನು ಇಂಟ್ರಡ್ಯೂಸ್ ಮಾಡಿದ್ದೇನೆ. ಈ ಸ್ಕೀಮ್ ಪ್ರಕಾರ ಮ್ಯಾಕ್ಸಿಮಮ್ ಎಷ್ಟಾಗುತ್ತದೆ, ಈಗಾಗಲೇ 15 ದಿನಗಳಲ್ಲಿ 5000 ಜನ ನೋಂದಣಿ ಮಾಡಿಸಿದ್ದಾರೆ. ನಮ್ಮ ಪ್ರಕಾರ 20000 people will be registered. How much money is given by these candidates? 100 ರೂ. ಅಂದರೆ 20.00 ಲಕ್ಷ ರೂ. ಆಗುತ್ತದೆ. ಅದರಲ್ಲಿ ಹಾರ್ಡ್‌ವೇರ್,

ಸಾಫ್ಟ್‌ವೇರ್ ಮತ್ತು ಮೆಟರೀಯಲ್, ಟ್ರೈನಿಂಗ್ ಒನ್ ಮ್ಯಾನ್, ಎಲ್ಲಾ ಸೇರಿರುತ್ತದೆ. 6 ತಿಂಗಳುಗಳಲ್ಲಿ ನಾನು ರಿಸಲ್ಟ್ ನೋಡುತ್ತೇನೆ, ಆ ರಿಸಲ್ಟ್ ಆದಮೇಲೆ ಆ ಹೊಸ ಸ್ಕೀಮ್ ಬಗ್ಗೆ ಗವರ್ನಮೆಂಟ್‌ನಲ್ಲಿ ನಾನು ಈ ತರಹ ಆಗಿದೆ, ಆ ಟೈಮ್‌ನಲ್ಲಿ ನಿಮ್ಮ ಸಲಹೆಯಂತೆ 100 ರೂ. ಕಲೆಕ್ಟ್ ಮಾಡಬಾರದು, ಗವರ್ನಮೆಂಟ್‌ನಲ್ಲಿ ಮಾಡೋಣ ಅಂದರೆ ಮಾಡೋಣ. Because it is now in the pilot stage, we have to go before the Government with some result. From Gujarat, from Rajasthan, the officers have come to know about this scheme. ನಾನು ಡೆಲ್ಲಿಗೆ ಹೋಗಿದ್ದಾಗ ನಮ್ಮ ಸೆಂಟ್ರಲ್ ಲೇಬರ್ ಮಿನಿಸ್ಟರ್ ಸಾಹೇಬ್‌ಸಿಂಗ್ ವರ್ಮಾಜಿ ಹಾಗೂ ಪ್ಲಾನಿಂಗ್ ಕಮಿಷನ್ ಚೇರ್‌ಮನ್‌ರವರ ಜೊತೆಯಲ್ಲಿ ಮಾತನಾಡಿದ್ದೇನೆ. This data is very important. ಅನಂತರ ಪ್ಲಾನಿಂಗ್ ಕಮಿಷನ್ ಚೇರ್‌ಮನ್ ಹೇಳಿದರು, ನಿಮ್ಮ ಡೈರೆಕ್ಟರ್ ಅವರನ್ನು ಕಳುಹಿಸಿ. ನಾನು ಮಂಗಳೂರಿಗೆ ಬಂದಾಗ ಆ ಪೈಲೆಟ್ ಸ್ಕೀಮ್ ಬಗ್ಗೆ ಏನಿದೆ ಅದರ ಬಗ್ಗೆ ಕೇಳುತ್ತೇನೆ ಎಂದು ಹೇಳಿದರು. These are the things which are going on. We have to do it in the larger interest.

ಅಧ್ಯಕ್ಷರು : ಬ್ರೀಫ್ ಆಗಿ ಉತ್ತರ ಹೇಳಿ. ಮುಂದೆ ಇನ್ನೂ ಅನೇಕ ಪ್ರಶ್ನೆಗಳಿವೆ. ಮಿಸ್ಟರ್ ಸುರೇಶ್‌ಕುಮಾರ್ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಶ್ರೀ ಖಮರುಲ್ ಇಸ್ಲಾಂ ಅವರು ಬಹಳ ಸ್ಮಾರ್ಟ್ ಆಗಿ ಸ್ಮಾರ್ಟ್ ಕಾರ್ಡ್ ಬಗ್ಗೆ ಆನ್ಸರ್ ಮಾಡುವ ಮುಖಾಂತರ ಇಡೀ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಇದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಅನ್ನು ಖಾಸಗೀಕರಣ ಮಾಡುವ ಬಹಳ ಸ್ಪಷ್ಟ ಪ್ರಯತ್ನ. ಕಂಪ್ಯೂಟರ್ ಏಡೆಡ್ ಮ್ಯಾನ್ ಪವರ್ ಪ್ಲೇಸ್‌ಮೆಂಟ್ ಯುಟಿಲಿಟಿ ಅನ್ನುವ ಹೆಸರಿನಲ್ಲಿ ಇವರು ಶುರು ಮಾಡಿರುವುದು.

11.40 ಎಎಂ

ಆ ಕಂಪನಿ ಜೊತೆಯಲ್ಲಿ ಎಂ.ಒ.ಯು ಏಕೆ ಶುರು ಮಾಡಿದ್ದೀರಿ? Was there an advertisement? ಕೊಟೇಶನ್ ಏನಾದರೂ ಕರೆದಿದ್ದೀರಾ? ಮೆ॥ ಲಿಯೋ ಟೆಕ್ನಾಲಜೀಸ್ ಅಂತ ಒಬ್ಬ ಆಂಧ್ರದವರು, ತಮಿಳುನಾಡಿನವರು ಬಂದು ಕಂಪನಿಯನ್ನು ಮಾಡಿಕೊಳ್ಳುತ್ತಾನೆ. ಇವರು ಎಂ.ಒ.ಯು ಮಾಡಿಕೊಳ್ಳುತ್ತಾರೆ. ಎಂಪ್ಲಾಯ್‌ಮೆಂಟ್ ಎಕ್ಸಚೇಂಚ್ ಕಚೇರಿ ಇರುವ ಜಾಗದಲ್ಲೇ ಅವರಿಗೆ ಕೊಡುತ್ತಾರ. ಸರ್ಕಾರಕ್ಕೆ ನನ್ನ ಸ್ಪಷ್ಟವಾದ ಪ್ರಶ್ನೆ ಏನೆಂದರೆ ಈ ರೀತಿ ಖಾಸಗೀಕರಣ ಮಾಡುವುದಕ್ಕೆ ಸರ್ಕಾರಕ್ಕೆ ಅನುಮತಿಯನ್ನು ಕೊಟ್ಟವರು ಯಾರು? ಈ ಸಂಸ್ಥೆಯನ್ನು ಮಾಡುವಾಗ ಬೇರೆ ಸಂಸ್ಥೆಗಳನ್ನು ಅಡ್ವರ್ಟೈಸ್‌ಮೆಂಟ್ ಮೂಲಕ ಕರೆದಿದ್ದೀರಾ? ನೂರು ರೂಪಾಯಿ ಫಿಕ್ಸ್ ಮಾಡುವುದಕ್ಕೆ ಸರ್ಕಾರಕ್ಕೆ ಅನುಮತಿಯನ್ನು ಕೊಟ್ಟವರು ಯಾರು?

Sri Qamarul Islam : For pilot scheme there is no need for it. A number of agencies have been called and discussed. No body has coming forward. This has been taken as a pilot scheme without any expenditure on the government.

ಶ್ರೀ ಎಸ್. ಸುರೇಶ್‌ಕುಮಾರ್ : ಸ್ವಾಮಿ, ಸರ್ಕಾರದ ವೆಚ್ಚವನ್ನು ನಾವು ಹೇಳುತ್ತಿಲ್ಲ. ಇದು ನಿರುದ್ಯೋಗಿಗಳನ್ನು ಶೋಷಣೆ ಮಾಡತಕ್ಕಂಥ ಕಾರ್ಯಕ್ರಮ. ಇದು ಯಾವುದೋ ಒಂದು ನಿರುದ್ಯೋಗಿ ಸಂಸ್ಥೆಗೆ ಉದ್ಯೋಗ ಕೊಡುವಂಥ ಕಾರ್ಯಕ್ರಮ.

ಶ್ರೀ ಎನ್. ಯೋಗೀಶ್ ಭಟ್ : 1983ರಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಮಾಹಿತಿ ಕೇಂದ್ರ ಕಂಪ್ಯೂಟರ್ ಸಾಫ್ಟ್‌ವೇರ್‌ನ್ನು ಇದಕ್ಕೆ ಸಂಬಂಧಪಟ್ಟಂತೆ ಕೊಟ್ಟಿದೆ. ಅದರ ಮೂಲಕವಾದರೂ ದಾಖಲಾತಿಯನ್ನು ಮಾಡುವಂಥಾದ್ದನ್ನು ಮಾಡಬಹುದಾಗಿತ್ತು. ಒಂದು ನಯಾಪೈಸೆ ಖರ್ಚು ಇಲ್ಲದೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಾಖಲಾತಿಯನ್ನು ಮಾಡುವುದಕ್ಕೆ ಸಾಧ್ಯವಿತ್ತು. ಅದನ್ನು ಮಾಡದೆ ಈಗ ಸಂಗ್ರಹ ಆದಂಥ ಹಣ ಎಷ್ಟು? ಸುಮಾರು 18 ಕೋಟಿ 65 ಲಕ್ಷ ಎಂದರೆ 94 ಸಾವಿರದ ಮುನ್ನೂರು. ಇಷ್ಟು ಹಣ ಸಂಗ್ರಹವಾಗಿದೆ. ಈ ಪೈಲಟ್ ಯೋಜನೆಗೆ ಇಷ್ಟೊಂದು ಹಣ ಸಂಗ್ರಹ ಮಾಡಿಕೊಂಡು ಯಾರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೊರಟಿದ್ದಾರೋ ಗೊತ್ತಿಲ್ಲ. ಯಾವುದೇ ಕಾರಣಕ್ಕೆ ಈ ತರಹ ಮಾಡತಕ್ಕಂಥ ವ್ಯವಸ್ಥೆ ಸರಿಯಲ್ಲವೆಂದು ನಾನು ಪ್ರತಿಭಟಿಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, 18 ಕೋಟಿ ರೂಪಾಯಿಗಳನ್ನು ಯಾರ ನಡುವೆ ಇದನ್ನು ಹಂಚುವುದಕ್ಕೆ ಇಷ್ಟು ಕಂಪನಿಗಳ ಜತೆಯಲ್ಲಿ ವ್ಯವಸ್ಥೆಯಾಗುತ್ತಿದೆ? ಇದಕ್ಕೂ ಕೂಡ ತಾವು ಉತ್ತರವನ್ನು ಕೊಡಬೇಕು. ಮತ್ತು ಈ ವ್ಯವಸ್ಥೆಯನ್ನು ಬಿಟ್ಟು ಕೇಂದ್ರ ಸರ್ಕಾರ ಸಾಫ್ಟವೇರ್‌ನ್ನು ಏನು ಕೊಟ್ಟಿದೆ ಅದರ ಉಪಯೋಗವನ್ನು ಏಕೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ? ಇದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಸಹಕಾರ ಕೊಡಬೇಕು. ಇನ್ನೂ ಒಂಬತ್ತು ಪ್ರಶ್ನೆಗಳು ಇವೆ.

ಶ್ರೀ ಖಮರುಲ್ ಇಸ್ಲಾಂ : ಈ ಓಲ್ಡ್ ಸಿಸ್ಟಮ್ ಜಾರಿಯಲ್ಲಿದೆ. ಈ ಕ್ವಾಲಿಟಿ ಬೇಸಿಸ್‌ನಲ್ಲಿ ಸ್ವಲ್ಪ ಒಳ್ಳೆಯ ರಿಸಲ್ಟ್‌ನ್ನು ಸರ್ಕಾರಕ್ಕೆ ತೋರಿಸಬೇಕು. ಹಾಗೆ ತೋರಿಸಿದ ಮೇಲೆ ಈ ತರಹ ನಮ್ಮ ಕನ್ನಡಿಗರಿಗೆ ಲಾಭ ಆಗುತ್ತಿದೆ ಎಂದು ನಾನು ಹೇಳಬೇಕು. ಆಮೇಲೆ ಒಂದು ಸ್ಕೀಮ್‌ನ್ನು ಮಾಡಬೇಕು. ಆ ಪೈಲಟ್ ಸ್ಕೀಮ್‌ಗೆ ಕಂಪಲ್‌ಶನ್ ಇಲ್ಲ. Even to-day, the old system is there. According to the old system, the boy has to go to the Employment Exchange every year. But, they can get themselves renewed here. All these advantages are there. It is only in the initial stage. ಇದೆಲ್ಲಾ ಪೈಲಟ್ ಸಿಸ್ಟಮ್‌ನಲ್ಲಿದೆ. ಇನ್ನು ಆರು ತಿಂಗಳು ಆದಮೇಲೆ - this scheme will be brought before the Government, and again we will consider, All these rules and regulations, everything will be followed. It is only in the larger interest. That too voluntarily. If anybody wants to register according to this, they can do it. There is no expenditure on this.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇದನ್ನು ಕಂಪಲ್ಸರಿಯಾಗಿ ಇಂಪೋಸ್ ಮಾಡುತ್ತಿದ್ದಾರೆ ಮತ್ತು ಯಾರು ಅಲ್ಲಿ ನಿರುದ್ಯೋಗಿ ಯುವಕರು ಇದ್ದಾರೆ. ಅವರ ಕಡೆಯಿಂದ ನೂರು ರೂಪಾಯಿ ಫೀಸ್ ವಸೂಲಿ ಮಾಡುತ್ತಿದ್ದಾರೆ. ಈ ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್‌ನಲ್ಲಿ

ಕೇವಲ ಹದಿನೈದು–ಇಪ್ಪತ್ತು ರೂಪಾಯಿಯಲ್ಲಿ ರಿಜಿಸ್ಟ್ರೇಶನ್ ಮಾಡುತ್ತಿದ್ದರು. ಆದರೆ ಈ ಒಂದು ವ್ಯವಸ್ಥೆಯ ಮುಖಾಂತರ ನೂರು ರೂಪಾಯಿಗಳನ್ನು ಒಬ್ಬ ನಿರುದ್ಯೋಗಿ ವಿದ್ಯಾರ್ಥಿ ಫೀಸ್ ಎಂದು ಕೊಡಬೇಕಾಗುತ್ತದೆ. ಹಾಗಾಗಿ ಇದನ್ನು ಶೋಷಣೆ ಮಾಡುವಂಥಾದ್ದು ಮತ್ತು ಸಂಪೂರ್ಣವಾಗಿ ಖಾಸಗೀಕರಣ ಮಾಡುವಂಥ ವ್ಯವಸ್ಥೆಯನ್ನು ಇವರು ತರುತ್ತಿದ್ದಾರೆ. ಯಾವುದೋ ಒಂದು ಕಂಪನಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ, ಅವರಿಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಈ ಯೋಜನೆಯನ್ನು ತರುತ್ತಿದ್ದಾರೆಯೇ ಹೊರತು ನಮ್ಮ ನಿರುದ್ಯೋಗಿ ಯುವಕರು ಏನಿದ್ದಾರೆ ಅವರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಈ ವ್ಯವಸ್ಥೆ ಇಲ್ಲ. ಇದು ಆ ಕಂಪನಿಗೆ ವ್ಯವಸ್ಥೆ ಮಾಡುವ ಸಲುವಾಗಿ ಯಾವುದೋ ಒಂದು ವ್ಯವಹಾರ ಮಾಡಿಕೊಳ್ಳುವ ಸಲುವಾಗಿ ಇದು ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನೀತಿ ಏನಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ಆಫೀಸ್ ಕಂಟಿನ್ಯು ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಲ್ಲಿರತಕ್ಕಂಥ ರಿಜಿಸ್ಟ್ರೇಶನ್ ಸಿಸ್ಟಮ್ ಕಂಟಿನ್ಯು ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ಸ್ಪಷ್ಟನೆ ಮಾಡದೆ ಕೇವಲ ಪೈಲಟ್ ಸಿಸ್ಟಮ್ ಎಂದು ಹೇಳಿಕೊಂಡು ಇದು ಆರು ತಿಂಗಳು ಎಂದು ಹೇಳಿ ಇದನ್ನು ಇನ್‌ಡೈರೆಕ್ಟ್ ಆಗಿ ಇಂಪೋಸ್ ಮಾಡುವಂಥಾದ್ದು ಮತ್ತು ನಮ್ಮ ನಿರುದ್ಯೋಗಿ ಯುವಕರ ಮೇಲೆ ಇದು ಇಂಪೋಸ್ ಮಾಡುವಂಥಾದ್ದು ಏನು ನಡೆಯುತ್ತಿದೆ ಇದರಿಂದ ನಮ್ಮ ನಿರುದ್ಯೋಗಿ ವಿದ್ಯಾರ್ಥಿಗಳು, ಯುವಕರು ಶೋಷಣೆಗೆ ಒಳಗಾಗುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇದರಲ್ಲಿ ಇದೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಮಾಡಬೇಕಾಗುತ್ತದೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಇವರು ಸರೋಜಿನಿ ಮಹಿಷಿ ವರದಿಗೆ ವಿರೋಧವಾದಂಥ ಕಾರ್ಯವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ನಿಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಇದು ಬಹಳ ಅನ್ಯಾಯದ ಕೆಲಸ. ಇದು ನಿರುದ್ಯೋಗಿ ಯುವಕರಿಗೆ ಮಾಡುತ್ತಾ ಇರುವಂತಹ ದೊಡ್ಡ ಮೋಸ.

ಅಧ್ಯಕ್ಷರು : ನಿಮ್ಮ ನಾಯಕರು ಹೇಳಿದ್ದಾರೆ. ಪುನಃ ರಿಪೀಟ್ ಮಾಡಬೇಡಿ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಸರೋಜಿನಿ ಮಹಿಷಿ ವರದಿಯ ತದ್ವಿರುದ್ಧವಾಗಿ ಇದನ್ನು ಮಾಡುತ್ತಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ಆಫೀಸ್‌ನಲ್ಲೇ ಇದನ್ನೂ ಇಟ್ಟಿದ್ದಾರಲ್ಲ? ಇದು ಮೋಸ ಅಲ್ವ?

(ಗೊಂದಲ)

ಅಧ್ಯಕ್ಷರು : ಒಂದೇ ಪಾರ್ಟಿಯವರು ಇಬ್ಬರು ಮಾತನಾಡಿದರೆ ಏನು ಅರ್ಥ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇವರು ವಿದ್ಯಾರ್ಥಿಗಳಿಂದ ಲಾಭ ಗಳಿಸಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಇದನ್ನು ಎಷ್ಟು ಜಿಲ್ಲೆಗಳಲ್ಲಿ ಸರ್ಕಾರ ಮಾಡುವುದಕ್ಕೆ ಹೊರಟಿದೆ? ಸರ್ಕಾರ ಈಗ ನೂರು ರೂಪಾಯಿ ಇರುವುದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಪ್ಲಾನ್ ಮಾಡಿದೆ. ಇದರ ಉದ್ದೇಶ ಏನು? ಇದು ಯಾವ ರೀತಿಯಲ್ಲಿ ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ

ಇವರು ಸಜ್ಜಾಗಿದ್ದಾರೆ ಎಂದು ತಿಳಿಸಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ಇದನ್ನು ಅವರು ದಯವಿಟ್ಟು ತಿಳಿಸಬೇಕು ಮತ್ತು ಈ ನೂರು ರೂಪಾಯಿ ಮಾಡಿರುವುದನ್ನು ರದ್ದು ಮಾಡಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನೂರು ರೂಪಾಯಿಗಳ ಖರ್ಚನ್ನು ಮಕ್ಕಳ ಹತ್ತಿರ ವಸೂಲು ಮಾಡುತ್ತಿರುವುದು ಸರಿಯಲ್ಲ.

ಶ್ರೀ ಸಿ. ಭೈರೇಗೌಡ : ಸ್ವಾಮಿ, ನಾನು ತಮ್ಮ ಗಮನಕ್ಕೆ ಈ ಬಗ್ಗೆ ಮಹತ್ತರವಾದಂಥ ವಿಚಾರವನ್ನು ತರತಕ್ಕಂಥಾದ್ದು ಏನು ಎಂಡರೆ, ಇಡೀ ದೇಶದಲ್ಲಿ ಇವತ್ತಿನ ದಿವಸ ಎಂಪ್ಲಾಯ್‌ಮೆಂಟ್ ರಾಕೆಟ್ ನಡೆಯುತ್ತಾ ಇರತಕ್ಕಂಥಾದ್ದನ್ನು ನೋಡಿದ್ದೇವೆ. ಪಂಜಾಬಿನಲ್ಲಿ ಏನಾಯಿತು ಎಂದು ನೋಡಿದ್ದೇವೆ ಮತ್ತು ಮಹಾರಾಷ್ಟ್ರದಲ್ಲಿ ಏನಾಯಿತು ಎಂದು ನೋಡಿದ್ದೇವೆ. ಹಾಗೆಯೇ ಕರ್ನಾಟಕದಲ್ಲಿ ಏನಾಯಿತು ಎಂದು ನೋಡತಕ್ಕಂಥ ಅನುಭವ ನಮಗೆ ಇದೆ. ಇವತ್ತು ಎಂಪ್ಲಾಯ್‌ಮೆಂಟ್ ರಾಕೆಟಿಂಗ್ ಸರ್ಕಾರಿ ರಂಗದಲ್ಲಿ ಈ ರೀತಿಯಾಗಿ ನಡೆಯುತ್ತಾ ಇರುವಾಗ ಖಾಸಗಿ ರಂಗದಲ್ಲೂ ನಡೆಯುವುದಿಲ್ಲ ಎಂದು ಖಾತರಿ ಏನು? ಆದ್ದರಿಂದ ಇದನ್ನು ರದ್ದುಪಡಿಸಬೇಕು ಎಂಬುದು ನನ್ನ ಆಗ್ರಹ. ಕಾರಣ ಏನೆಂದರೆ ಸರ್ಕಾರಿ ರಂಗದಲ್ಲಿ ಸಾಕಷ್ಟು ವೈಫಲ್ಯವಾಗಿದೆ. ಇದನ್ನು ಖಾಸಗಿ ರಂಗಕ್ಕೆ ತೆಗೆದುಕೊಂಡು ಹೋಗಿ ಆಕಳಿಸುತ್ತಾ ಇರತಕ್ಕಂಥವನಿಗೆ ಹಾಸಿಗೆಯನ್ನು ಹಾಸಿಕೊಟ್ಟಹಾಗೆ ಆಗುತ್ತದೆ. ಈ ಲೂಟಿ ಮಾಡುವ ಯೋಜನೆಯನ್ನು ಕೈಬಿಡಬೇಕು ಎನ್ನತಕ್ಕದ್ದು ನನ್ನ ಆಗ್ರಹ.

ಅಧ್ಯಕ್ಷರು : ಅವರು ಕೊನೆಯ ಪ್ರಶ್ನೆಯನ್ನು ಕೇಳುತ್ತಾರೆ ಅಷ್ಟೆ.

ಶ್ರೀ ಖಮರುಲ್ ಇಸ್ಲಾಂ : ತಾವು ಒಂದು ಸಲಹೆಯನ್ನು ಕೊಟ್ಟಿದ್ದೀರಿ. He has given me one suggestion. One issue is there. You can give your opinion. O.K. ತಾವು ತಮ್ಮ ಸಲಹೆಯನ್ನು ಕೊಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಂತ್ರಿಗಳು ಇಂಗ್ಲೀಷ್‌ನಲ್ಲಿ ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು : ಕನ್ನಡದಲ್ಲಿ ಮಾತನಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಈ ನೂರು ರೂಪಾಯಿಗಳನ್ನು ವಸೂಲು ಮಾಡಿ ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುತ್ತಿದ್ದೀರಲ್ಲಾ ಅವರ ಹತ್ತಿರ ಹಿಂಸೆ ಮಾಡಿ ವಸೂಲಿ ಮಾಡುತ್ತಿದ್ದೀರಲ್ಲಾ ಈ ಸ್ಲಾನ್ ತಯಾರು ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಹೇಳಿ.

Sri Qamarul Islam : I just wanted to request the Hon'ble Opposition Leader and all members.....

ಅಧ್ಯಕ್ಷರು : ಕನ್ನಡದಲ್ಲಿ ಹೇಳಿ. ಇಷ್ಟು ಹೊತ್ತು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಿದ್ದೀರಲ್ಲಾ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ಅವರನ್ನು ಕನ್ನಡದಲ್ಲೇ ಮಾತನಾಡಿ ಎಂದು ನಾನು ಏಕೆ ಕೇಳಲಿಲ್ಲ ಎಂದರೆ ಮುಖ್ಯಮಂತ್ರಿಗಳೇ ಇಂಗ್ಲೀಷಿನಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳ ಆದೇಶ ಎಲ್ಲಾ ಇಂಗ್ಲೀಷ್‌ನಲ್ಲೇ ಬಂದಿದೆ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಅವರು ಇದ್ದಾಗ ಈ ಪ್ರಶ್ನೆಯನ್ನು ಕೇಳಿ. ಈಗ ಈ ಮಂತ್ರಿಗಳ ಬಗ್ಗೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮುಖ್ಯಮಂತ್ರಿಗಳ ಬಗ್ಗೆ ಮೊದಲು ಹೇಳಿ. ಅವರ ವ್ಯವಹಾರ ಎಲ್ಲಾ ಇಂಗ್ಲೀಷಿನಲ್ಲೇ ನಡೆಯುತ್ತಾ ಇದೆ.

ಅಧ್ಯಕ್ಷರು : ದಯವಿಟ್ಟು ಅವರು ಇಲ್ಲಿ ಇಲ್ಲದೇ ಇರುವಾಗ ಮಾತನಾಡಬೇಡಿ. ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲ. ಪಾಟೀಲರೇ, ಅವರು ಇಂಗ್ಲೀಷಿನಲ್ಲಿ ಮಾತನಾಡಿದರೆ ಆವಾಗ ನೀವು ಕೇಳಿ.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, 1996ರಲ್ಲಿ ಸುಪ್ರೀಂ ಕೋರ್ಟಿನ ಆದೇಶ ಬಂದಮೇಲೆ ನಮ್ಮ ಇಲಾಖೆ ಮೂಲಕ ಎಂಪ್ಲಾಯ್‌ಮೆಂಟ್ ಆಗುತ್ತಾ ಇಲ್ಲ. ಈಗ ನಮ್ಮ ಕರ್ನಾಟಕದಲ್ಲಿ ತಾವು ನೋಡಿದ್ದೀರಿ. ಟೀಚರ್ಸ್, ಪೊಲೀಸ್, ಪಶುಸಂಗೋಪನೆ ಇಲಾಖೆಯ ಎಂಪ್ಲಾಯೀಸ್ ನೇಮಕಾತಿಯೆಲ್ಲಾ ಜಾಹೀರಾತು ಮೂಲಕವೇ ಆಗುತ್ತಿದೆ. Earlier government departments, semi-government departments, local bodies, ಇದೆಲ್ಲಾ ಎಂಪ್ಲಾಯ್‌ಮೆಂಟ್ ಕೂಡ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ಆ್ಯಕ್ಟ್ ಪ್ರಕಾರ ಮೊದಲು ಆಗುತ್ತಿತ್ತು ಈಗ.....

ಶ್ರೀ ಡಿ.ವಿ. ಸದಾನಂದಗೌಡ : ಹಾಗಾದರೆ ಇದನ್ನು ಬಿಟ್ಟುಬಿಡಿ. ಎಲ್ಲಾ ಬೇರೆ ಬೇರೆ ಇಲಾಖೆಗಳಿಂದ ಮಾಡುತ್ತಿದ್ದರೆ ಇದು ಯಾಕೆ ಬೇಕು? What is the purpose of having this?

ಶ್ರೀ ಖಮರುಲ್ ಇಸ್ಲಾಂ : ಈಗ ಏನು ಮಾಡಬೇಕು? ನಮ್ಮ ವಿರೋಧ ಪಕ್ಷದ ನಾಯಕರು ನಮಗೆ ಒಂದು ಲೆಟರ್ ಮತ್ತು ಬಿಲ್ ಕಾಪಿಯನ್ನು ಕೊಟ್ಟಿದ್ದಾರೆ. ಆ ಬಿಲ್ ಈಗ ನನ್ನ ಕಡೆ ಇದೆ. ಆ ಬಿಲ್‌ನ್ನು ನಾನು ಈ ಸದನದ ಮುಂದೆ ಪಾಸ್ ಮಾಡುವುದಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ. ಬಿಲ್ ಪ್ರಕಾರ ತಮಗೆ ಗೊತ್ತಿದೆ ಏನೆಂದರೆ – The West Bengal Legislative Assembly has passed, a Bill. They have said all government and semi-government employment should be through this. But for that Bill which has been passed by the Assembly, ಪ್ರೆಸಿಡೆಂಟ್ ಆಫ್ ಇಂಡಿಯಾ ಅವರು ಒಪ್ಪಿಗೆಯನ್ನು ಕೊಡಲಿಲ್ಲ. In the meantime, ಈ ಸಲಹೆ ಬಂದಿತು. either the department has to be closed, ಇಲ್ಲ ಎಂದರೆ ನಾನು ಆ ಮಾಡರ್ನ್ ಟೆಕ್ನಿಕ್ಸ್ ಏನಿದೆ ಅದನ್ನು ಉಪಯೋಗ ಮಾಡಬೇಕು. ಆ ಮಾಡರ್ನ್ ಟೆಕ್ನಿಕ್ಸ್ ಉಪಯೋಗ ಮಾಡಬೇಕು ಎಂದರೆ ಸರ್ಕಾರಕ್ಕೆ ನಾನು ಒಂದು ಸ್ಕೀಮ್‌ನ್ನು ಕೊಡಬೇಕು. ಆ ಸ್ಕೀಮ್ ಸಕ್ಸಸ್ ಆಗುತ್ತದೆಯೇ ಇಲ್ಲವೇ ಎಂದು ನೋಡುವುದಕ್ಕೆ ಈ ಪೈಲೆಟ್ ಸ್ಕೀಮ್‌ನ್ನು ಮಾಡಿದ್ದೇವೆ. ಈ ಪೈಲಟ್ ಸ್ಕೀಮ್‌ನಲ್ಲಿ ಐದು ಸಾವಿರ ಜನ ಹದಿನೈದು ದಿವಸದಲ್ಲಿ ಎಲ್ಲಾ ಆರು ಸೆಂಟರ್‌ಗಳಲ್ಲಿ ರಿಜಿಸ್ಟ್ರೇಶನ್ ಮಾಡಿಕೊಂಡಿದ್ದಾರೆ. ಇನ್ನು ನಾಲ್ಕು ತಿಂಗಳಲ್ಲಿ ಎಷ್ಟು ಜನ ಆಗುತ್ತಾರೆ? ಮ್ಯಾಕ್ಸಿಮಮ್ ಎಂದು ತೆಗೆದುಕೊಂಡರೆ ಇಪ್ಪತ್ತು ಸಾವಿರ ಆಗುತ್ತದೆ. ಈ 20 ಸಾವಿರ ಜನರಿಗೆ ನಾನು ಎಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ಸ್‌ಗೆ...

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಬ್ರೀಫ್ ಆಗಿ ಉತ್ತರ ಹೇಳಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ ಒಂದೊಂದು ಪ್ರಶ್ನೆಗೆ ಒಂದೊಂದು ಗಂಟೆ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು : ಇನ್ನೂ 9 ಪ್ರಶ್ನೆಗಳು ಇವೆ. ಆ 9 ಪ್ರಶ್ನೆಗಳು ಲ್ಯಾಪ್ಸ್ ಆಗುವ ಸಾಧ್ಯತೆ ಇದೆ. ನಾನು ಈ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಮುಂದೆ 9 ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಇನ್ನು ನಿಮ್ಮ ಇಷ್ಟ. ನಾನು ಈ ವಿಷಯವನ್ನು ಸದನಕ್ಕೆ ಬಿಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದವರು ಕಾಲ ಕಳೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ನೀಲಕಂಠಪ್ಪನವರೆ, ಮುಂದೆ ನಿಮ್ಮ ಪ್ರಶ್ನೆ ಬರುತ್ತದೆ. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಪೂಜಾರ್ ಅವರೆ, ತಾವು ಬೇಗ ಮುಗಿಸಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಅವರು ಮುಗಿಸುವುದಿಲ್ಲ. ಇಲ್ಲಿ ನಮ್ಮ ಪ್ರಶ್ನೆ ಅಲ್ಲ. ದಯಮಾಡಿ ನಾನು ಹೇಳುತ್ತೇನೆ ಕೇಳಿ.

ಅಧ್ಯಕ್ಷರು : ಈ ರೀತಿಯಾದರೆ ಬೇರೆ ಸದಸ್ಯರ ಪ್ರಶ್ನೆಗಳ ಗತಿ ಏನಾಗಬೇಕು?

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಒಂದು ಕಾರ್ಡ್‌ಗೆ ಎಷ್ಟು ರೂಪಾಯಿ ಖರ್ಚು ಬರುತ್ತದೆ ಎನ್ನುವ ಮಾಹಿತಿಯನ್ನು ಕೊಡಬೇಕು. 1983ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಮಾಹಿತಿ ಕೇಂದ್ರ ರೈಲ್ವೆ ಕಂಪ್ಯೂಟರ್ ಸಾಫ್ಟ್‌ವೇರ್ ತಯಾರು ಮಾಡಿಕೊಟ್ಟಿದ್ದರು. ಅದರಲ್ಲಿ ಇದನ್ನೂ ನೋಂದಾಯಿಸುವಂತಹ ಅವಕಾಶ ಇದೆ. ಸರ್ಕಾರ ಎನ್.ಐ.ಸಿ ಯವರನ್ನು ಕೇಳಿ ಮತ್ತೊಂದು ವೆಬ್‌ಸೈಟ್ ಪ್ರಾರಂಭ ಮಾಡಬಹುದಾಗಿತ್ತು. ಹೊಸದಾಗಿ ಇಂತಹ ಒಂದು ಸಂಸ್ಥೆಗೆ ಕೊಡುವಂತಹ ಅವಶ್ಯಕತೆ ಏನಿತ್ತು? ದಯವಿಟ್ಟು ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಸದಸ್ಯರಿಗೆ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ತಾವು ನನ್ನ ಕೊಠಡಿಗೆ ಬಂದರೆ ಎಲ್ಲಾ ಡೀಟೇಲ್ಸ್ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ಇಲ್ಲಿ ಕೆಲವು ವಿಷಯಗಳನ್ನು ಮುಚ್ಚಿ ಹಾಕುತ್ತಿದೆ. ಇವತ್ತು ನಿರುದ್ಯೋಗಿ ಯುವಕರಿಗೆ ಅನ್ಯಾಯ ಮಾಡುತ್ತಿದ್ದಾರೆ. ಅವರು ನೂರು ರೂಪಾಯಿಗಳ ಫೀಜು ತೆಗೆದುಕೊಳ್ಳುತ್ತಿರುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅವರು ಒಂದು ರೀತಿಯಲ್ಲಿ ಯುವಕರನ್ನು ಶೋಷಣೆ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಡೀಲ್ಸ್ ಇದರಲ್ಲಿ ನಡೆದಿದೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಇದರಲ್ಲಿ ನಡೆಯುತ್ತಿದೆ. ಇದ್ದ ವ್ಯವಸ್ಥೆಯಲ್ಲಿ ಏನು ತೊಂದರೆ ಆಗಿತ್ತು? ಕೆಲವೊಂದು ವಿಷಯಗಳನ್ನು ಸರ್ಕಾರ ಮುಚ್ಚಿ ಹಾಕುತ್ತಿದೆ. ನೂರು ರೂಪಾಯಿಗಳನ್ನು ನಿರುದ್ಯೋಗಿ ಯುವಕರಿಗೆ ಇಂಪೋಸ್ ಮಾಡುತ್ತಿರುವುದು ಇದೆಯಲ್ಲ ಇದು ಒಂದು ರೀತಿ ಶೋಷಣೆ ಮಾಡಲು ಹೊರಟಿದ್ದಾರೆ. ಈ ಒಂದು ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಈ ಒಂದು ವ್ಯವಸ್ಥೆ ಇದೆಯಲ್ಲಾ ಇದನ್ನು ಖಾಸಗೀಕರಣ ಮಾಡಲು ಹೊರಟಿದ್ದಾರೆ. ಖಾಸಗೀ ಕಂಪನಿಗಳ ಜೊತೆ ಇವರು ಒಪ್ಪಂದ ಮಾಡಿಕೊಂಡಿದ್ದಾರೆ. ಆ ವಿಷಯಗಳನ್ನು ಸರ್ಕಾರ ಬಹಿರಂಗ ಮಾಡುತ್ತಿಲ್ಲ. ಅದನ್ನು ಮುಚ್ಚಿಡುವಂತಹ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಈ ಶೋಷಣೆಗೆ, ಖಾಸಗೀ ಸಂಸ್ಥೆಯ ಪೋಷಕರಾಗಿ ಸರ್ಕಾರ ಕೆಲಸ ಮಾಡುತ್ತಿದ್ದಾರೆ.

ಮತ್ತು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡುತ್ತಿದ್ದಾರೆ. ಈ ಸರ್ಕಾರದ ನೀತಿ ಏನು ಇದೆ ಅದನ್ನು ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ ಇದು ಬೇಸ್‌ಲೆಸ್ ಅಲಿಗೇಷನ್. ಅವರು ಸುಮ್ಮನೇ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ಮಾಡುತ್ತಿದ್ದಾರೆ. ಈ ಪೈಲೆಟ್ ಸ್ಕೀಮ್ ಬಗ್ಗೆ ನಾನು ಈ ಸದನದಲ್ಲಿ ಎಲ್ಲವನ್ನೂ ಎಕ್ಸ್‌ಪ್ಲೇನ್ ಮಾಡುತ್ತೇನೆ. ಈಗ 5 ಸಾವಿರ ಜನ ರಿಜಿಸ್ಟರ್ ಮಾಡಿದರೆ 5 ಲಕ್ಷ ರೂ, ಈ 5 ಲಕ್ಷ ರೂ.ನಲ್ಲಿ ಜನರಿಗೆ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹಳೆಯ ಸ್ಕೀಮ್ ಪ್ರಕಾರ ಫೋಟೋ ಕೊಡಬೇಕು, ಎಲ್ಲಾ ಮಾಹಿತಿ ಕೊಡಬೇಕು ಮತ್ತೆ ಪ್ರತಿ ವರ್ಷ ಹೋಗಬೇಕು. ನಮ್ಮ ಕನ್ನಡಿಗರಿಗೆ ನಾನು ಈ ಮಾಡರ್ನ್ ಟೆಕ್ನಿಕ್‌ನಲ್ಲಿ ಆ ಎಕ್ಸ್‌ಲೆನ್ಸ್ ಏನು ಇದೆ ಅದನ್ನು ಆ ಕಂಪ್ಯೂಟರ್‌ನಲ್ಲಿ ಕೊಟ್ಟಿಲ್ಲ ಅಂದರೆ ಯಾರಿಗೆ ಕೆಲಸ ಸಿಗುತ್ತದೆ? ಇದು ಕನ್ನಡಿಗರ ಪರವಾಗಿ ನಮ್ಮ ಸರ್ಕಾರ ಮಾಡಿರುವ ಯೋಜನೆ. ಈ ಯೋಜನೆ ಬಹಳ ಮಹತ್ವಾಕಾಂಕ್ಷೆಯಿಂದ ಕೂಡಿದೆ.

(ಗೊಂದಲ)

ಅಧ್ಯಕ್ಷರು : ಸಾಕು ಬಿಡಿ. ಮುಂದಿನ ಪ್ರಶ್ನೆ ಮಾನ್ಯ ಕೌಜಲಗಿಯವರು ಕೇಳಿ. ನಾವು ಮೊದಲಿನಿಂದಲೂ ಪಾಲನೆ ಮಾಡಿಕೊಂಡು ಬಂದಿರುವುದು ಏನೆಂದರೆ ಒಂದು ಗಂಟೆ ವೇಳೆಯಲ್ಲಿ ಸಮಯ ಸಿಕ್ಕಿದರೆ ಆಮೇಲೆ ಅವಕಾಶ ಕೊಡುತ್ತೇವೆ. ಅದು ಪ್ರೊಸೀಜರ್. ಅದನ್ನು ನಾವು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಈಗ ITI ಕಾಲೇಜು ಜೊತೆಗೆ ITI ಕೇಂದ್ರಗಳಿಗೆ ಸಂಬಂಧ ಪಟ್ಟ ಹಾಗೆ ಎರಡೂ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಒಟ್ಟಿಗೆ ಕೇಳಬಹುದು ಮಾನ್ಯ ಕೌಜಲಗಿಯವರು ಮತ್ತು ಶ್ರೀ ಗೋಪಾಲ ಭಂಡಾರಿಯವರೇ ಪ್ರಶ್ನೆಯನ್ನು ಕೇಳಿ.

ರಾಜ್ಯದಲ್ಲಿ ಹೊಸ ಸರ್ಕಾರಿ ಐ.ಟಿ.ಐ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ

3150 (346) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಸರ್ಕಾರಿ ಐ.ಟಿ.ಐ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ;

ಆ) ಸರ್ಕಾರಿ ಕಟ್ಟಡ ಲಭ್ಯವಿರುವಲ್ಲಿ ಆದ್ಯತೆಯ ಮೇರೆಗೆ ಸರ್ಕಾರಿ ಐ.ಟಿ.ಐ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿರುವ ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯ ಬೇರೆ ಕಡೆಗೆ ಸ್ಥಳಾಂತರಗೊಂಡು ಅಲ್ಲಿ ಕಟ್ಟಡ ಲಭ್ಯವಿರುವುದರಿಂದ ಅಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.